**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ. ರವರ ನ್ಯಾಯಾಲಯ,**
**ತಿಪಟೂರು**

**ಸಿ.ಸಿ. ನಂ. 1029 /17** **ಪ್ರಾ.ಸಾ – 5**
**ಚಾ.ಸಾ – 8**

**ದಿನಾಂಕ: 10-06-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

| | | |
|---|---|---|
| ಸಾಕ್ಷಿಯ ಹೆಸರು | : | ವಿಜಯಕುಮಾರ್ ಸಿ. |
| ತಂದೆಯ ಹೆಸರು | : | ಸಿ.ಬಿ. ಚನ್ನಪ್ಪ |
| ವಯಸ್ಸು | : | 55 ವರ್ಷ |
| ಉದ್ಯೋಗ | : | ಕೆ ಎಸ್ ಆರ್ ಟಿ ಸಿ ಬಸ್ ನ ಚಾಲಕ ಹಾಗೂ ನಿರ್ವಾಹಕ |
| ವಾಸಸ್ಥಳ | : | ಶಿವಮಾಗ್ಗ |

**ಮುಖ್ಯ ವಿಚಾರಣೆ : ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :-**

ದಿನಾಂಕ 12-11-2016 ರಂದು ನಾನು ಮತ್ತು ಚಾಸಾ-1 ರವರು ನಮ್ಮ ಕೆ ಎಸ್ ಆರ್ ಟಿ ಸಿ ಬಸ್ ನೊಂದಣಿ ಸಂಖ್ಯೆ KA 17F 1722 ರೂಟ್ ನಂ. 31 ರ ಬಸ್ಸಿ ನಲ್ಲಿ ನಾನು ನಿರ್ವಾಹಕನಾಗಿ ಮತ್ತು ಚಾಸ—1 ಚಾಲಕನಾಗಿ ಶಿವಮೊಗ್ಗದಿಂದ ಬೆಂಗಳೂರಿಗೆ ಹೋಗಿ , ಬೆಂಗಳೂರಿನಿಂದ ಶಿವಮೊಗ್ಗಕ್ಕೆ ವಾಪಾಸ್ಸು ಬರುತ್ತಿರುವಾಗ ಮಾರ್ಗ ಮದ್ಯ ದಲ್ಲಿ ದಿನಾಂಕ 13-11-2016 ರಂದು ಬೆಳಗಿನ ಜಾವ 4.00 ಗಂಟೆ ಸಮಯದಲ್ಲಿ ಹುಚ್ಚಗೊಂಡನ ಹಳ್ಳಿ ಸಮೀಪ ಶ್ರೀ ನಿಧಿ ಡಾಬ ಎದುರಿನ ಎನ್ ಹೆಚ್ 206 ರಸ್ತೆಯಲ್ಲಿ ಮರಕ್ಕೆ KA ~~03~~ -MX 7125 ನೇ ಕೆಂಪು ಬಣ್ಣದ ಮಾರುತಿ ಸಿಫ್ಟ ಕಾರು ಮರಕ್ಕೆ ಡಿಕ್ಕಿಯಾಗಿ ನಿಂತಿತ್ತು . ಸದರಿ ಅಪಘೌತ ವನ್ನು ನಿಲ್ಲಿಸಿ ನೋಡಲು KA ~~05~~ -Z -4084 ನಂಬರಿನ ಬಿಳಿ ಬಣ್ಣದ ಮಾರುತಿ ಓಮಿನಿ ಕಾರಿನ ಚಾಲಕ ತನ್ನ ಕಾರನ್ನು ರಸ್ತೆಯಲ್ಲೇ ನಿಲ್ಲೀಸಿಕೊಂಡು ಅಪಘಾತವನ್ನು ನೋಡಿಕೊಂಡು ನಿಂತಿದ್ದನು . ಸದರಿ ಅಪಘಾತ ಆಗುವ ಕಾಲಕ್ಕೆ ಬಹಳ ಮಂಜು ಬೀಳುತ್ತಿತ್ತು . ಚಾಸಾ-1 ಬಸ್ಸನ್ನು ನಿಧಾನವಾಗಿ ಚಲಾಯಿಸಿಕೊಂಡು ಬರುತ್ತಿದ್ದು ಬಹಳ ಮಂಜು ಕವಿದಿದ್ದರಿಂದ ದಾರಿ ಮದ್ಯದಲ್ಲಿ ಕಾರು ನಿಂತಿದ್ದು ಸರಿಯಾಗಿ ಕಾಣದೇ ಅದಕ್ಕೆ ಡಿಕ್ಕಿ ಪಡಿಸಿರುತ್ತಾರೆ. ಇದರ ಸದರಿ ಓಮಿನಿ ಕಾರು ಮುಂದೆ ನಿಂತಿದ್ದ

KA 54M 3033 ನೇ ಕಾರಿನ ಡಿಕ್ಕಿಯಾಗಿ ಜಖಂ ಗೊಂಡಿರುತ್ತದೆ . ನಂತರ ನಾನು ಮತ್ತು ಚಾಸ—1 ಬಸ್ಸಿ ನಿಂದ ಇಳಿದು ಅವರನ್ನು ಉಪಚರಿಸಿರುತ್ತೇವೆ.

ನಂತರ ಬಸ್ಸಿ ನಲ್ಲಿದ್ದ ಪ್ರಯಾಣಿಕರನ್ನು ಬೇರೆ ಬಸ್ಸಿ ನಲ್ಲಿ ಕೂರಿಸಿ ಕಳುಹಿಸಿಕೊಟ್ಟ ನಂತರ KA-54-M 3033 ನೇ ಕಾರಿನಲ್ಲಿ ಇದ್ದ 3 ಜನರು ಚಾಸಾ-1 ರವರಿಗೆ ಹೊಡೆಯಲು ಪ್ರಾರಂಬಿಸಿದ್ದು ಆಗ ನಾನು ಅದನ್ನು ತಡೆಯಲು ಹೋದಾಗ ಆರೋಪಿತನು ನನಗೆ ಅವಾಚ್ಯ ಶಬ್ದಗಳಿಂದ ಬೈದರು. ನಂತರ ಆರೋಪಿತರು ಚಾಸಾ-1 ರವರನ್ನು ಅವರ ಕಾರಿನಲ್ಲಿ ಕೂರಿಸಿಕೊಂಡು ಬಲವಂತವಾಗಿ ಕರೆದುಕೂಂಡು ಹೋಗಿರುತ್ತಾರೆ. ಸಾಕ್ಷಿ ಮುಂದುವರೆದು ಆರೋಪಿತರು ಪೋಲಿಸರು ಅಲ್ಲಿ ನಿಂತಿದ್ದನ್ನು ನೋಡಿದರೂ ಸಹ ಚಾಸ—1 ರವರನ್ನು ಕರೆದುಕೊಂಡು ಹೋಗಿರುತ್ತಾರೇ ಅನಂತರ ನಾನು ಮತ್ತು ಪೋಲಿಸರು ಸದರಿ ವಾಹನವನ್ನು ಹಿಂಬಾಲಿಸಿಕೊಂಡು ಹೋಗುತ್ತಿದ್ದು ಅವರು ಹಾಸನದ ಸರ್ಕಲ್ ಬಳಿ ಚಾಸ —1 ರವರಿಗೆ ಹೊಡೆದು ಆತನು ಧರಿದ ಸಮವಸ್ತ್ರವನ್ನು ಹಾರಿದು ಹಾಕಿ ಅಲ್ಲಿಂದ ಚಸಾ-1 ರವರನ್ನು ಕಿಡ್ನ್ಯಾ ಪ್ ಮಾಡಿಕೋಂಡು ಹೊರಟು ಹೋಗಿರುತಾರೆ. ನಾವು ತಿಪಟೂರು ಗ್ರಾಮಾಂತರ ಪೋಲಿಸ ಠಾಣೆಯ ಬಳಿ ಬ್ಯಾ ರಿಕೇಡ್ ಹಾಕಿ ನಿಂತಿದ್ದರೂ ಸಹ ಸದರಿ ಆರೋಪಿ ಬ್ಯಾ ರಿಕೇಡನ್ನು ಹೊಡೆದು ಕಾರನ್ನು ಓಡಿಸಿಕೊಂಡು ಕೆ. ಬಿ. ಕ್ರಾಸ್ ನಿಂದ ತುರುವೇಕೆರೆ ಅಲ್ಲಿಂದ ಕುಣಿಗಲ್ ಗೆ ಹೋಗಿರುತ್ತಾರೆ . ಆರೋಪಿತರು ಚಾಸಾ-1 ರವರಿಗೆ ದಾರಿಯುದ್ದಕ್ಕೂ ಹೊಡೆಯುತ್ತಿದ್ದು ಅತನಿಂದ ಒಂದೂವರೆ ಲಕ್ಷ ಹಣವನ್ನು ಕೇಳುತ್ತಿದ್ದರು.

ನಂತರ ಕುಣಿಗಲ್ ನಲ್ಲಿ ಚಾಸಾ-1 ರವರು ಅವರ ಬಳಿ ಹಣ ಇರುವುದಿಲ್ಲ ಮುಂದೆಕೊಡುತ್ತೇನೆಂದು ಹೇಳಿಆತನ ಅಕೌಂಟ್ ನಂಬರನ್ನು ಅವರಿಗೆಕೊಟುಟ ಚಾಸ—1 ರವರು ಕುಣಿಗಲ್ ನಿಂದ ತಿಪಟೂರಿಗೆ ಖಾಸಗಿ ಬಸ್ತಿ ನಲ್ಲಿ ಮಧ್ಯಾ ಹ್ನ 2.00ಗಂಟೆಗೆ ಬಂದಿರುತ್ತಾರೆ. ಚಾಸ—1 ರವರು ಪೋಲಿಸ ಠಾಣೆಗೆ ಬಂದುನೆಡೆದ ಎಲ್ಲಾ ಸಂಗತಿಗಳನ್ನು ನನ್ನ ಸಮಕ್ಷಮ ಪೋಲಿಸರಿಗೆ ತಿಳಿಸಿರುತ್ತಾರೆ. ನಾನು ಈ ಸಂಬಂದ ನನ್ನ ಹೇಳಿಕೆಯನ್ನು ಪೋಲಿಸರಿಗೆ ನೀಡಿರುತ್ತೇನೆ. ಬಸ್ಸು ಮತ್ತು ಕಾರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾ ಯಾಲಯದ ಮುಂದಿರುವ ಮು.ಮಾ.1 ಮತ್ತು 2 ನುನ ನೋಡಿ ಗುರುತಿಸಿರುತ್ತಾರೆ .

ಆರೋಪಿತರು ಈ ದಿನ ಗೈರು ಹಾಜರಾಗಿದ್ದು, ಅವರ ಗುರುತಿಸುವಿಕೆಗೆ ಆಕ್ಷೇಪಣೆ ಇಲ್ಲವೆಂದು ಅರೋಪಿತರ ಪರ ವಕೀಲರು ಗೈರು ಹಾಜರಾತಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯು ತನ್ನ ಹೇಳಿಕೆಗೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿಯುತ್ತಿರುವುದರಿಂದ, ಮಾನ್ಯ ಎಪಿಪಿರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ, ವಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ನೀಡಲಾಯಿತು)**

**ವಾಟೀ ಸವಾಲು : ಮಾನ್ಯ ಸಹಾಯಕ ಅಭಿಯೋಜಕರಿಂದ :-**

ಆರೋಪಿತರು ಚಾಸಾ- 1 ರವರನ್ನು ಉದ್ದೇಶಿಸಿ ನಿನ್ನನ್ನು ಕೊಲೆ ಮಾಡುತ್ತೇನೆಂದು ಜೀವ ಬೆದರಿಕೆ ಹಾಕಿರುತ್ತಾರೆ.

**ವಾಟೀ ಸವಾಲು ಶ್ರೀ ಕೆಎಸ್ ಎಸ್ ವಕೀಲರಿಂದಃ**

ನಾವು ಅಪಘಾತ ಆಗುವ ದಿನ ಬೆಂಗಳೂರಿನಿಂದ ರಾತ್ರಿ 1.00 ಗಂಟೆಗೆ ಬಿಟ್ಟಿರುತ್ತೇವೆ. ಬಸ್ಸಿ ನಲ್ಲಿ ಸುಮಾರು 20 ರಿಂದ 25 ಜನ ಪ್ರಯಾಣಿಕರು ಇದ್ದರು. ನಾನು ಎಲ್ಲರಿಗೂ ಟಿಕೇಟನ್ನು ಕೊಟ್ಟಿದ್ದೆ. ನಾನು ಅಪಘಾತ ಆಗುವ ಕಾಲಕ್ಕೆ ನಿದ್ದೆ ಮಾಡುತ್ತಿದ್ದೆ ಎಂದರೆ ಸರಿಯಲ್ಲ. ಬೆಳಗಿನ ಜಾವ 4.00 ಗಂಟೆಗೆ ಕತ್ತಲು ಇತ್ತು ಎಂದರೆ ಸ ರಿ. ಅಲ್ಲಿ ಯಾವುದೇ ಬೀದಿ ದೀಪಗಳು ಇರಲಿಲ್ಲ. ಚಾಸಾ- 1 ರವರು ಬಸಸನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿಕೊಂಡು ಬಂದು ಮಾತಿರುತಿ ಓಮಿನಿಕಾರಿಗೆ ಡಿಕ್ಕಿಪಡಿಸಿ ಅದರ ಪರಿಣಾಮ ಮುಂದೆ ನಿಂತಿದ್ದ ಅರೋಪಿತರ ಕಾರಿಗೆ ಡಿಕ್ಕಿ ಹೊಡೆದಿರುತ್ತದೆ ಎಂದರೆ ಸ ರಿಯಲ್ಲ. ರಸ್ತೆಯು ಸುಮಾರು 35 ಅಡಿ ಅಗಲ ಇದ್ದು ಅದು ಟೂ ವೇ ರಸ್ತೆಯಾಗಿರುತ್ತದೆ . ಆರೋಪಿತರು ರಸ್ತೆಯ ಪಕ್ಕದಲಿಲ ನಿಲ್ಲಿಸಿ ಅಪಘಾತವನುನನೋಡುತಿತದದರು ಎದರೆ ಸಾಕ್ಷಿ ಅವರು ರಸ್ತೆಯ ಮದ್ಯದಲ್ಲೇ ನಿಲ್ಲಿಸಿದ್ದರು ಎಂದು ನುಡಿಯುತ್ತಾರೆ. ಆರೋಪಿತರು ಚಾಸಾ-1 ರವರಿಗೆ ಮತ್ತು ನನಗೆ ಅವಾಚ್ಯ ಶಬ್ಬಗಳಿಂದ ಬೈದಿರುವುದಿಲ್ಲ , ಜೀವ ಬೆದರಿಕೆ ಹಾಕಿರವುದಿಲ್ಲ ಎಂದರೆ ಸರಿಯಲ್ಲ , ಚಾಸ—1 ರವರಿಗೆ ಹೊಡೆದಿರುವುದಿಲ್ಲ ಎಂದರೆ ಸ ರಿಯಲ್ಲ. ಚಾಸ—1 ರವರ ಸಮವಸ್ತ್ರವನ್ನು ಹರಿದು ಹಾಕಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತನು ಚಾಸ—1 ರವರನ್ನು ಕಿಡ್ನಾಪ್ ಮಾಡಿಕೊಂಡು ಕರೆದುಕೊಂಡು ಹೋಗಿರುವುದಿಲ್ಲ ಹಾಗೂ ಯಾವುದೇ ಬ್ಯಾರೀಕೆಡನ್ನು ಹೊಡೆದಿರುವುದಿಲ್ಲ , ಚಾಸಾ-1 ರವರನ್ನು ಕುಣಿಗಲ್ ನ್ನು

ಬಿಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ಕುರಣೆಗಲ್ ನಲ್ಲಿ ಚಾಸಾ-1 ರವರಿಗೆ ದೂರನ್ನು ನೀಡಲು ತೊಂದರೆ ಇತ್ತಾ ಎಂದರೆ ಸಾಕ್ಷಿ ನಾವು ಇಲ್ಲಿ ದೂರನ್ನು ನೀಡಲು ಕಾಯುತಿತದ್ದ ಕಾರಣ ಅವರು ತಿಪಟೂರಿಗೆ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿತರು ಚಾಸ— 1 ರವರ ಬಳಿ ಒಂದೂವರೆ ಲಕ್ಷ ಹಣ ಕೇಳಿರುವುದಿಲ್ಲ ಎಂದರೆ ಸರಿಯಲ್ಲ.

ಚಾಸಾ-1 ಮಾಡಿದ ಅಪಘಾತದಿಂದ ಮಾಡಿದ ಜಖಂ ಗಳನ್ನು ಸರಿ ಪಡಿಸಿಕೊಳ್ಳಲು ಕೇಳಿದ ಕಾರಣ ನಾವು ನಮ್ಮ ಮೇಲಧಿಕಾರಿಗಳ ಮಾತು ಕೇಳಿ ಆರೋಪಿತರ ವಿರುದ್ದ ಸುಳ್ಳು ದೂರನ್ನು ದಾಖಲಿಸಿ ಆತನು ಧರಿಸಿದ ಶರ್ಟ್‌ನು ಹರಿದುಹಾಕಿರುತ್ತೇವೆ ಎಂದರೆ ಸರಿಯಲ್ಲ. ನಮಗೆ ಎಲ್ಲಾ ಸತ್ಯ ಸಂಗತಿಗಳು ತಿಳಿದಿದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯತ್ತಿದ್ದೇನೆ ಎಂದರೆ ಸ ರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾ ಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)**

**ಪ್ರಧಾನ ಸಿವಿಲ್ ನ್ಯಾ ಯಾಧೀಶರು, ತಿಪಟೂರು.**